**ಓ.ಎಸ್ ನಂ. 93/2020 ಪಿ.ಡಬ್ಲ್ಯೂ-1 (ರಂಗನಾಥ)**

**ಸಾಕ್ಷಿಯನ್ನು ದಿನಾಂಕಃ 25.02.2026 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿ 7 ಮತ್ತು 8 ರವರ ಪರ ವಕೀಲರಾದ ಶ್ರೀ ಜಿ ಎನ್ ಎನ್ ವಕೀಲರಿಂದಃ**

1. ಕರಾರು ಪತ್ರ ಆಗುವ ಸಮಯದಲ್ಲಿ ಸ್ವಾಮಿ ಅಲಿಯಾಸ್ ಗವಿರವರ ಹೆಂಡತಿಯ ಸಹಿಯನ್ನು ಪಡೆದುಕೊಂಡಿರುತ್ತೀರಾ ಎಂದರೆ ಸರಿ. ಸದರಿ ಸ್ವಾಮಿ ಅಲಿಯಾಸ್ ಗವಿರವರಿಗೆ ಹಂಡತಿ ಮಕ್ಕಳು ಇರುವ ಬಗ್ಗೆ ಕರಾರು ಪತ್ರ ಆಗುವ ಸಮಯದಲ್ಲಿ ನನಗೆ ತಿಳಿದಿತ್ತು. ದಾವಾಸ್ತಿಯು ಸದರಿ ಸ್ವಾಮಿ ಅಲಿಯಾಸ್ ಗವಿರವರಿಗೆ ಪಿತ್ರ್ರಾರ್ಜಿತ ಆಸ್ತಿಯಾಗಿರುತ್ತದೆ ಎಂದರೆ ಸರಿ. ಸದರಿ ಪ್ರತಿವಾದಿಗಳಿಗೆ ದಾವಾಸ್ತಿ ಹೇಗೆ ಬಂದಿರುತ್ತದೆ ಎಂದು ನನಗೆತಿಳಿದಿತ್ತು, ಸಾಕ್ಷಿಯು ಮುಂದವರಿದು ಕೋರ್ಟಿನಿಂದ ಬಂದಿರುತ್ತದೆ ಎಂದು ನುಡಿಯುತ್ತಾರೆ. ಕರಾರು ಪತ್ರ ಆಗುವ ಸಮಯದಲ್ಲಿ ದಾವಾಸ್ತಿ ಸಂಬಂಧಿಸಿದಂತೆ ದಾಖಲಾತಿಗಳನ್ನು ನಾನು ನೋಡಿದ್ದೆನು. ನಾನು ಏನು ದಾಖಲಾತಿಗಳನ್ನು ನೋಡಿರುತ್ತೇನೆ ಎಂದು ನನಗೆ ಸರಿಯಾಗಿ ತಿಳಿದಿರುವುದಿಲ್ಲ. ಅದರೆ ಸಿದ್ದೇಗೌಡರ ಹೆಸರಿನಲ್ಲಿ ದಾಖಲಾತಿಗಳು ಇರುತ್ತವೆ ಎಂದು ನುಡಿಯುತ್ತಾರೆ. ಕರಾರು ಪತ್ರ ಆಗುವ ಸಮಯದಲ್ಲಿ ಪ್ರತಿವಾದಿ 1 ರಿಂದ 4 ರವರ ಹೆಸರುಗಳು ದಾವಾಸ್ತಿಯಲ್ಲಿ ಬರುತಿತ್ತಾ ಎಂದರೆ ಸಾಕ್ಷಿಯು ಅದು ನನಗೆ ನೆನಪು ಇರುವುದಿಲ್ಲ ಎಂದು ನುಡಿಯುತ್ತಾರೆ. ಪ್ರತಿವಾದಿ 6 ರವರ ಗಂಡ ಸ್ವಾಮಿ ಅಲಿಯಾಸ್ ಗವಿರವರಿಗೆ ಮತ್ತು ಪ್ರತಿವಾದಿ 7 ಮತ್ತು 8 ರವರಿಗೆ ಕರಾರು ಪತ್ರದ ಮುಂಗಡ ಹಣ ಅವರಿಗೆ ತಲುಪಿರುವುದಿಲ್ಲ ಎಂದರೆ ಸಾಕ್ಷಿಯು ಸಿದ್ದೇಗೌಡ ಮತ್ತು ಪ್ರತಿವಾದಿ 6 ರವರ ಗಂಡ ರವರು ಪಡೆದುಕೊಂಡಿರುತ್ತಾರೆ ಎಂದು ನುಡಿಯುತ್ತಾರೆ.

2. ಕರಾರುಪತ್ರದಲ್ಲಿ ಸ್ವಾಮಿ ಅಲಿಯಾಸ್ ಗವಿರವರು ಅವರ ಹೆಂಡತಿ ಮತ್ತು ಮಕ್ಕಳ ಪರವಾಗಿಯು ಸಹ ಸಹಿ ಮಾಡುತ್ತಿರುವ ಬಗ್ಗೆ ಕರಾರು ಪತ್ರದಲ್ಲಿ ಸಹಿ ಮಾಡಿರುವುದಿಲ್ಲ ಎಂದರೆ ಸಾಕ್ಷಿಯು ಕ್ರಯಪತ್ರ ಆಗುವ ಸಮಯದಲ್ಲಿ ಅವರುಗಳ ಸಹಿಯನ್ನು ಹಾಕಿಸುವುದಾಗಿ ತಿಳಿಸಿದ್ದರು ಎಂದು ನುಡಿಯುತ್ತಾರೆ. ನಾನು ಕರಾರು ಪತ್ರವನ್ನು 2014 ನೇ ಇಸವಿಯಲ್ಲಿ ಮಾಡಿಸಿಕೊಂಡಿರುತ್ತೇನೆ ನಂತರ ಕ್ರಯಪತ್ರವನ್ನು ಬರೆದುಕೊಡುವಂತೆ ನೋಟೀಸನ್ನು ದಿಃ 07.10.2020 ರಂದು ನೀಡಿರುತ್ತೇನೆ ಎಂದರೆ ಸರಿ. ನಾನು ಮೇಲೆ ಹೇಳಿದ ನೋಟಿಸ್ ಪ್ರತಿವಾದಿ 6 ಮಂಜುಳಾ ರವರಿಗೆ ತಲುಪಿರುವುದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಗೆ ಪ್ರತಿವಾದಿಗಳಿಗೆ ನೀಡಿದ ನೋಟೀಸಿನ ಅಂಚೆ ರಸೀದಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೀರಾ ಎಂದರೆ ಸಾಕ್ಷಿಯ ಅವರಿಗೆ ತಲುಪಿರುತ್ತದೆ ನಾನು ನಮ್ಮ ವಕೀಲರನ್ನು ಕೇಳಿ ಹೇಳಬೇಕಾಗುತ್ತದೆ ಎಂದು ನುಡಿಯುತ್ತಾರೆ. ಸ್ವಾಮಿ ಅಲಿಯಾಸ್ ಗವಿರವರ ಮೈನರ್ ಮಕ್ಕಳ ಹಕ್ಕುಗಳನ್ನು ಸಹ ಅವರ ಹಿತ ದೃಷ್ಟಿಯಿಂದ ಮಾರಾಟ ಮಾಡಲು ಅನುಮತಿಯನ್ನು ಕೋರಿ ನ್ಯಾಯಾಲಯದಿಂದ ಆದೇಶ ವನ್ನು ಪಡೆದುಕೊಂಡಿರುತ್ತೀರಾ ಎಂದರೆ ಸಾಕ್ಷಿಯು ಕ್ರಯ ಪತ್ರ ನೊಂದಣಿಯಾಗುವ ಸಮಯದಲ್ಲಿ ಎಲ್ಲರ ಸಹಿ ಮಾಡಿಸಿಕೊಡುತ್ತೇನೆಂದು ಸ್ವಾಮಿ ಅಲಿಯಾಸ್ ಗವಿರವರು ತಿಳಿಸಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ಸ್ವಾಮಿ ಅಲಿಯಾಸ್ ಗವಿರವರ ಹೆಂಡತಿ ಮಕ್ಕಳು ಪ್ರತಿವಾದಿ 6 ರಿಂದ 8 ರವರಿಗೆ ದಾವಾಸ್ತಿಯನ್ನು ಮಾರಾಟ ಮಾಡುವ ಬಗ್ಗೆ ತಿಳಿದಿರುವುದಿಲ್ಲ ಎಂದರೆ ಸರಿಯಲ್ಲ. ಪಿತ್ರಾರ್ಜಿತ ಆಸ್ತಿಯಾಗಿರುವುದರಿಂದ ಪ್ರತಿವಾದಿ 7 ಮತ್ತು 8 ರವರಿಗೂ ಸಹ ದಾವಾಸ್ತಿಯಲ್ಲಿ ಹಕ್ಕು ಇರುತ್ತದೆ ಎಂದರೆ ಸರಿ.

ಮರುವಿಚಾರಣೆ ಇಲ್ಲ.

ವಾದಿ ಪರ ವಕೀಲರು ಸಮಯ ಕೋರಿದ್ದು, ಸಮಯ ನೀಡಲಾಯಿತು.

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸಾ ಸ ಇ ಒ.,

ಹಿರಿಯ ಸಿ.ಜೆ ಮತ್ತು ಜೆ.ಎಂ.ಎಫ್.ಸಿ.,
ಹೆಚ್.ಡಿ.ಕೋಟೆ